ಓದಿದ್ದೆ ಅಷ್ಟೆ. ನನಗೂ ಅವರಿಗೂ ವಯಸ್ಸಿನಲ್ಲಿ ಸುಮಾರು ಒಂಬತ್ತು ವರ್ಷಗಳ ಅಂತರ. ನಂಗಿನ್ನೂ ಏಳು ವರ್ಷವಾಗಿದ್ದಾಗ ತಾತನ ಪಾರ್ಟ್ ನೋಡೋಕ್ಕೆ ನಾಟಕಗಳಿಗೇನೋ ಹೋಗುತ್ತಿದ್ದೆ. ಆದರೆ ಯಾವತ್ತೂ ಪಾರ್ಟ್ ಮಾಡೋ ಅವಕಾಶ ಸಿಗಲಿಲ್ಲ. ನಮ್ಮ ಮನೆ ಹೆಣ್ಣುಮಕ್ಕಳ್ಯಾರೂ ಹಾಗೆ ನೋಡಿದರೆ ನಾಟಕ, ಸಿನಿಮಾದಲ್ಲಿ ಪಾರ್ಟ್ ಮಾಡೇ ಇಲ್ಲ. ನನ್ನ ಒಬ್ಬ ಚಿಕ್ಕ ನಾದಿನಿ ಮಾತ್ರ ಕೆಲವು ಪಾತ್ರಗಳನ್ನು ಮಾಡಿದ್ದಳು.

ನನಗೆ ಇವರನ್ನೇ ಕೊಟ್ಟು ಮದುವೆ ಅಂತ ಗೊತ್ತಾಗಿದ್ದರೂ ಆಗಿನ ಕಾಲದಲ್ಲಿ ಮಾತನಾಡಿಸೋದು, ಸುತ್ತಾಡೋದು ಈ ತರಹದ್ದೆಲ್ಲಾ ಇರಲೇ ಇಲ್ಲವಲ್ಲ. ಸುತ್ತಲಿರೋರು ನನ್ನನ್ನು ಸ್ವಲ್ಪ ತಮಾಷೆ ಮಾಡೋರು ಅಷ್ಟೆ. ನಂಗೆ ಮದುವೆ ಅಂದರೇನು ಅಂತ ಗೊತ್ತಿದ್ದರೆ ತಾನೇ! ನಂಗೆ ಹದಿನಾಲ್ಕು ವರ್ಷ ಆಗುತ್ತಿದ್ದ ಹಾಗೆ ಮದುವೆ ತಯಾರಿ ನಡೀತು. ಆಗ ಯಜಮಾನರಿಗೆ 24 ವರ್ಷ. ನನ್ನ ಮಾವ ನಮ್ಮ ಮದುವೆ ಬಗ್ಗೆ ಅಷ್ಟೊಂದು ಆಸೆ ಪಟ್ಟಿದ್ದಷ್ಟೆ. ಮದುವೆಯ ಹೊತ್ತಿಗೆ ಅವರು ತೀರಿಕೊಂಡೇ ಬಿಟ್ಟಿದ್ದರು ಪಾಪ! ನಮ್ಮ ಮದುವೆ ಜೂನ್ 25, 1953ರಂದು ನಂಜನಗೂಡಿನಲ್ಲಿ ರಾಣಪ್ಪ ಛತ್ರ ಅಂತಿತ್ತು, ಅಲ್ಲಿ ನಡೀತು. ಹೇಳಿಕೊಳ್ಳೋ ಅಂತ ಮದುವೆಯೇನಲ್ಲ. ಯಜಮಾನರಿದ್ದ ನಾಟಕ ಕಂಪನಿ ಆಗ ಹೊಸಪೇಟೇಲಿ ಕ್ಯಾಂಪ್ ಮಾಡಿತ್ತು. ಸರಿರಾತ್ರಿವರೆಗೂ ನಾಟಕ ಮಾಡಿ ಮಾರನೆ ದಿನ ಮದುವೆ ಮಾಡಿಕೊಳ್ಳಲು ನಂಜನಗೂಡಿಗೆ ಧಾವಿಸಿ ಬರಬೇಕಾಯಿತು. ನಮ್ಮ ಕಡೆ ಮದುವೆ ಗಂಡಿಲ್ಲದೆ

